532

ಮೈಸೂರ ಗೆಜೆಟ.

ಸರ್ಕಾರದಿಂದ ಪ್ರಾಯಿಷ್ಆದ್ದು.

ಬೆಂಗಳೂರು, ಶನಿವಾರ ಆಗಸ್ಟ್ ತಾ|| 9, ಸ್ 1890.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೩ನೇ ಭಾಗ.

ಘನವನ್ನು ಹೊಂದಿದ ಶ್ರೀಮನ್ ಮೈಸೂರು ಮಹಾರಾಜರವರಿಂದ ಮಂಜೂರಾದ ಆಕ್ಟುಗಳು ಮತ್ತು ರೆಗ್ಯುಲೇಷ್ಗಳು.

ಮೈಸೂರ್ ಗವರ್ನ್ಮೆಂಟ್.

ಲೆಜಿಸ್ಲೇಟಿವ್ ಇಲಾಖೆ.

ಇದರಡಿ ಕಂಡ ರೆಗ್ಯುಲೇಷ್ 1890ನೇ ಇಸವಿ ಮೇ 6ನೇ ಮಂಗಳವಾರದಲ್ಲಿ ಘನವನ್ನು ಹೊಂದಿದ ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಮಂಜೂರಾತಿಯಂ ಪಡದು, ಸಕಲ ಜನಗಳ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತಿದೆ.

1890ನೇ ಇಸವಿಯ Iನೇ ನಂಬರ್ ರೆಗ್ಯುಲೇಷ್.

ಬೆಂಗಳೂರು ಮತ್ತು ಮೈಸೂರ್ ಷಹರ್ಗಳಲ್ಲಿ ಜಾರಿಯಲ್ಲಿರತಕ್ಕ 1871ನೇ ಇಸವಿಯ ಮ್ಯೂನಿಸಿಪಲ್ ರೆಗ್ಯುಲೇಷ್ಗಳನ್ನು ತಿದ್ದುಪಡಿ ಮಾಡತಕ್ಕ ಬಗ್ಗೆ ಹುಟ್ಟಿದ ರೆಗ್ಯುಲೇಷ್.

1871ನೇ ಇಸವಿ ಮಾರ್ಚಿ 31ನೇ ಮಂಗಳವಾರ, 51. J. ನಂಬರುಳ್ಳ ಮಂತ್ರಾಲೋಚಕ ಸಮಾಜದೊಳಗೆ ವೈಸರಾಯ್ ಮತ್ತು ಇಂಡ್ಯ ಗವರ್ನರ್ ಜನರಲ್ಲವರ ಇಸ್ತಿಹಾರ್ ಮೂಲಕ ಘೋಷಿಸಲ್ಪಟ್ಟ, ಮತ್ತು 1883ನೇ ಇಸವಿ ಏಪ್ರಿಲ್ 6ನೇ ಮಂಗಳವಾರ 108ನೇ ನಂಬರುಳ್ಳ ಮೈಸೂರ್ ದಿವಾನರವರ ಇಸ್ತಿಹಾರ್ ಮೂಲಕ ತಿದ್ದುಪಡಿಯಾದ ಮತ್ತು 1888ನೇ ಇಸವಿಯ IIIನೇ ರೆಗ್ಯುಲೇಷ್ ಮೂಲಕ ಮೈಸೂರ್ ಷಹರ್ನೊಳು ಜಾರಿಯಲ್ಲಿ ತರಲ್ಪಟ್ಟ ಸ್ 1871ನೇ ಇಸವಿಯ ಕಾಯಿದೆಗಳ ಸಂಗ್ರಹವಾದ ಮ್ಯೂನಿಸಿಪಲ್ ರೆಗ್ಯುಲೇಷ್ಗಳನ್ನು ತಿದ್ದುಪಾಡು ಮಾಡ ಬೇಕಾದದ್ದು ಯುಕ್ತವಾಗಿರುವದರಿಂದ ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದ್ದೂರವರು ಇದರಡಿ ಕಂಡಂತೆ ನಿಬಂಧಿಸಿರುತ್ತಾರೆ:—

1. ಮೇಲೆ ತಿಳಿಸಲ್ಪಟ್ಟ ಮ್ಯೂನಿಸಿಪಲ್ ರೆಗ್ಯುಲೇಷ್ಗಳ ಹನ್ನೊಂದನೇ ಸೆಕ್ಷನಿಗೆ ಬದಲಾಗಿ ಇದರಡಿ ಕಂಡಂತೆ ಸೇರಿಸಲ್ಪಡತಕ್ಕದ್ದು, ಏನಂದರೆ—

"II. (1.) ಶ್ರೀಮರ್ ಮೈಸೂರ್ ಮಹಾರಾಜ ಸರ್ಕಾರದವರು ಆಗಿಂದಾಗ್ಗೆ" "ಬೆಂಗಳೂರ್ ಷಹರ್ ಮ್ಯೂನಿಸಿಪೆಲ್ ಕಮ್ಮಿಷನರ್‌ಗಳ ಪ್ರೆಸಿಡೆಂಟರು" ಎಂದು ಕರೆಯಲ್ಪಡುವ ಒಬ್ಬ ಆಫಿಸರನ್ನು ನೊಕರರ್ಮಾಡಬಹುದು. ಮೇಲೆ ಕಂಡ ಗವರ್ಮೆಂಟಿನವರಿಂದ, ಸದರೀ ಆಫಿಸರಿಗೆ, ನೊಕರರ್ಮಾಡಲ್ಪಡಬಹುದಾದ ಇತರ ಕೆಲಸಗಳು ಯಾವದಾದರು ಇದ್ದರೆ ಅಂಥಾ ಕೆಲಸಗಳಿಂಡನೆ ಸದರೀ ಪ್ರೆಸಿಡೆಂಪ್ ಉದ್ಯೋಗವನ್ನು ಅವರು ವಹಿಸತಕ್ಕದ್ದಲ್ಲದೆ, ಮೇಲೆ ಕಂಡ ಗವರ್ಮೆಂಟಿನವರಿಗೆ ಇಷ್ಟ ಪ್ರಂಟಾದಾಗ ಅವರು ಉದ್ಯೋಗ ಪದದಿಂದ ನಿವೃತಿಸಲ್ಪಡತಕ್ಕದ್ದು. ಮತ್ತು ಅವರಿಗೆ ಈ ರೆಗ್ಯುಲೇರ್ಷ್ಗಳನ್ನನುಸರಿಸಿ ವಸೂಲಾಗತಕ್ಕ ಮ್ಯೂನಿಸಿಪೆಲ್ ಫಂಡ್‌ಗಳಿಂದಲೂ ಮತ್ತು ಸದರೀ ಗವರ್ಮೆಂಟಿನವರು ಆಗಿಂದಾಗ್ಗೆ ಗೊತ್ತುಮಾಡಬಹುದಾದ ದಾಮಷಾಯಿಯಂತೆ ಪ್ರತಿ ಫಂಡಿನಿಂದಲೂ ರುಸುಂಗಳು ಸಲ್ಲಬಹುದು. ಪರಂತು ಮೇಲೆ ತಿಳಿಸಲ್ಪಟ್ಟಂತೆ ಪ್ರೆಸಿಡೆಂಟರ್ಯಾರೂ ನೊಕರರ್ಮಾಡಲ್ಪಡದ ಪಕ್ಷಕ್ಕೆ ತತ್ಕಾಲದಲ್ಲಿರುವ ಬೆಂಗಳೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರು ಬೆಂಗಳೂರು ಷಹರ್ ಮ್ಯೂನಿಸಿಪೆಲ್ ಕಮ್ಮಿಷನರ್‌ಗಳಿಗೆ ಉದ್ಯೋಗಧರ್ಮ ಕ್ರಯುಕ್ತವಾದ ಪ್ರೆಸಿಡೆಂಟರಾಗಿರತಕ್ಕದ್ದು.

(2.) ಶ್ರೀಮರ್ ಮೈಸೂರ್ ಮಹಾರಾಜಾ ಸರ್ಕಾರದವರು ಆಗಿಂದಾಗ್ಗೆ "ಬೆಂಗಳೂರ್ ಷಹರ್ ಮ್ಯೂನಿಸಿಪೆಲ್ ಕಮ್ಮಿಷನರ್‌ಗಳ ವೈಸ್ ಪ್ರೆಸಿಡೆಂಟರ್" ಎಂದು ಕರೆಯಲ್ಪಡುವ ಒಬ್ಬ ಆಫಿಸರನ್ನು ನೊಕರರ್ಮಾಡ ಬಹುದು.

(3.) ಈ ರೆಗ್ಯುಲೇರ್ಷ್ಗಳ ಕಾರ್ಯಗಳಿಗಾಗಿ ಸಂಪೂರ್ಣವಾದ ಕಾರ್‌ಬಾರ್ ಅಧಿಕಾರವೂ ಮತ್ತು ಜವಾಬ್ದಾರಿಯೂ, ಪ್ರೆಸಿಡೆಂಟರಲ್ಲಿಯೂ ಮತ್ತು ಅವರ ಗೈರ್ ಹಾಜರಿಯಲ್ಲಿ ಅಥವಾ ಅವರ ಮೇಲ್ವಿಚಾರಣೆಗೊಳಪಟ್ಟು ಮತ್ತು ಅವರ ಹುಕುಂಗಳನ್ನನುಸರಿಸಿ ವೈಸ್ ಪ್ರೆಸಿಡೆಂಟರಲ್ಲಿಯೂ ಅಡಗಿರತಕ್ಕದ್ದು. ಮ್ಯೂನಿಸಿಪೆಲ್ ಕಮ್ಮಿಷನರ್‌ಗಳಿಂದ ಮಾಡಲ್ಪಡತಕ್ಕದ್ದೆಂದು ಇದರಲ್ಲಿ ಮುಂದೆ ನಿಯಮಿಸಲ್ಪಡುವ ತವಾಂ ಕಾರ್‌ಬಾರೀ ಕೆಲಸಗಳೂ, ಸಂದರ್ಭದ ದೆಸೆಯಿಂದ ವಿರುದ್ಧಾಭಿಪ್ರಾಯವೇನೂ ಕಾಣಬಾರದೆ ಇದ್ದರೆ, ಸದರೀ ಪ್ರೆಸಿಡೆಂಟರಿಂದಾಗಲಿ ವೈಸ್ ಪ್ರೆಸಿಡೆಂಟರಿಂದಾಗಲಿ ಮಾಡಲ್ಪಡತಕ್ಕದ್ದು. ಪರಂತು ಈ ಸೆಕ್ಷನಿನಲ್ಲಿ ಅಡಗಿರುವ ಯಾವ ಅಂಶವೂ ಸದರೀ ಪ್ರೆಸಿಡೆಂಟರ ಅಥವಾ ವೈಸ್ ಪ್ರೆಸಿಡೆಂಟರ ಯಾವ ಕಾರ್ಯವಾಗಲಿ ಯಾವ ವಿಾಟಿಂಗ್‌ನಲ್ಲಾಗಲಿ ಹಾಜರಿರುವ ಮ್ಯೂನಿಸಿಪೆಲ್ ಕಮ್ಮಿಷನರ್‌ಗಳಿಂದ ರದ್ದುಮಾಡಲ್ಪಡತಕ್ಕದ್ದನ್ನು ನಿರೋಧಿಸುವದಾಗಿ ಅಭಿಪ್ರಾಯ ಪಡಕ್ಕದ್ದಲ್ಲವು.

2. ಮೇಲೆ ಕಂಡ ಮ್ಯೂನಿಸಿಪೆಲ್ ರೆಗ್ಯುಲೇರ್ಷ್ಗಳ ಹನ್ನೊಂದನೆಯ ಸೆಕ್ಷನಿಗೆ ಬದಲಾಗಿ ಹಿಂದಿನ ಸೆಕ್ಷನಿ[illegible]ರಿಸಲ್ಪಟ್ಟ ಸೆಕ್ಷನನ್ನು 1888ನೇ ಇಸವಿಯ IIIನೇ ನಂಬರ್ ರೆಗ್ಯುಲೇರ್ಷ್ ಅನುಸರಿಸಿ ಮೈಸೂರ್ ಷಹ[illegible]ಜಾರಿಯಲ್ಲಿ ತರಲ್ಪಟ್ಟಿರುವ ಮೇಲೆ ಕಂಡ ಮ್ಯೂನಿಸಿಪೆಲ್ ರೆಗ್ಯುಲೇರ್ಷ್ಗಳ ಬಂದು ಭಾಗವನ್ನಾಗಿ ಪರಿಗಣಿಸಲ್ಪಡತಕ್ಕದ್ದು.

ಕೆ. ಶೇಷಾದ್ರಿ ಅಯ್ಯರ್,
ಮೈಸೂರ್ ಶೀಮೆಯ ದಿವಾರ್.

Mysore Govt. Central Press, Bangalore.—1890.